**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 5479/2023**
**ಚಾಸಾ - 01/ ಪ್ರಾಸಾ - 01**

| | |
|---|---|
| ಹೆಸರು | **ರಾದ** |
| ಗಂಡನ ಹೆಸರು | **ಕೃಷ್ಣೆಗೌಡ** |
| ವಯಸ್ಸು | **32** |
| ಉದ್ಯೋಗ | **ಗೃಹಿಣಿ** |
| ವಿಳಾಸ | **ತಾವರೆಕರೆ** |

**ದಿನಾಂಕಃ 03-04-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

ಮೃತ ಲಿಶ್ಮಿತಾ ಕೆ ರವರು ನನ್ನ ಮಗಳು. ದಿಃ 07-06-2023 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ನನ್ನ ಮಗಳು ಶಾಲಾ ವಾಹನದಲ್ಲಿ ಅವರ ಶಾಲೆಯಾದ ಎಂ.ಇ. ಎಸ್ ಶಾಲೆಗೆ ಹೋಗಿದ್ದರು. ಪ್ರತಿದಿನ ಅವರು ಸಂಜೆ 4.0 ಗಂಟೆಯ ಸಮಯದಲ್ಲಿ ಮನೆಗೆ ವಾಪಸ್ಸು ಬರುತ್ತಿದ್ದರು, ಆದರೆ ಆ ದಿನದಂದು ಸಂಜೆ 3.45 ರ ಸಮಯದಲ್ಲಿ ಮನೆಗೆ ಶಾಲಾ ವಾಹನ ಸಂ. ಕೆಎ-43-5807 ರಲ್ಲಿ ಬಂದರು. ಸದರಿ ವಾಹನವನ್ನು ಆರೋಪಿಯು ಚಾಲನೆ ಮಾಡುತ್ತಿದ್ದರು. ಕನಿಷ್ಕಾ,ಪ್ರೇಮ್‌ಮತ್ತು ನನ್ನ ಮಗಳು ರಸ್ತೆಯನ್ನು ದಾಟುತ್ತಿದ್ದಾಗ ಆರೋಪಿಯು ಅವರನ್ನು ಗಮನಿಸದೇ ನನ್ನ ಮಗಳ ಮೇಲೆ ಶಾಲಾ ವಾಹನದ ಎರಡು ಚಕ್ರಗಳನ್ನು ಅರಿಸಿದರು. ಸದರಿ ವಾಹನಕ್ಕೆ ಆಯಾ ಇರುವುದಿಲ್ಲ. ಸದರಿ ಅಪಘಾತಕ್ಕೆ ಶಾಲೆಯ ಆಡಳಿತ ಮಂಡಳಿಯವರು ಕಾರಣರಾಗಿರುತ್ತಾರೆ. ಅಪಘಾತ ಮಾಡಿದ ನಂತರ ಆರೋಪಿಯು ವಾಹನವನ್ನು ನಿಲ್ಲಿಸದೇ ಹೊರಟುಹೋದರು.

ಸದರಿ ಅಪಘಾತದಿಂದ ನನ್ನ ಮಗಳ ಹೊಟ್ಟೆ, ಎದೆ ಮತ್ತು ಕೈಗಳಿಗೆ ಏಟಾಗಿತ್ತು. ನಾನು ಮತ್ತು ಚಾಸಾ-14 ರವರು ರಸ್ತೆಯಲ್ಲಿ ಹೋಗುತ್ತಿದ್ದ ಒಂದು ವಾಹನವನ್ನು ತಡೆದು ನನ್ನ ಮಗಳನ್ನು ತಾವರೆಕರೆಯಲ್ಲಿ ಇರುವ ಅಮ್ಮಾ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಅಲ್ಲಿ ಚಿಕಿತ್ಸೆಯನ್ನು ನೀಡಲು ಆಗುವುದಿಲ್ಲ ಎಂದು ಹೇಳಿದ ಕಾರಣ ನನನ್ನ ಮಗಳನ್ನು ಸುಂಕದಕಟ್ಟೆಯಲ್ಲಿ ಇರುವ ಲಕ್ಷ್ಮಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ವೈದ್ಯರು ಪರೀಕ್ಷಿಸಿ ನನ್ನ ಮಗಳು ಮಾರ್ಗ ಮದ್ಯದಲ್ಲಿಯೇ ಮೃತಪಟ್ಟಿದ್ದಾರೆಂದು ತಿಳಿಸಿದರು.

ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಆರೋಪಿ ಮತ್ತು ಶಾಲೆಯ ಆಡಳಿತ ವರ್ಗದವರ ಮೇಲೆ ದೂರನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅಪಘಾತ ನಡೆದ 3-4 ದಿನಗಳ ನಂತರ ಪೋಲೀಸರು ಅಪಘಾತ ನಡೆದ ಸ್ಥಳಕ್ಕೆ ಬಂದು ಸ್ಥಳವನ್ನು ಪರಿಶೀಲನೆ ಮಾಡಿದರು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ನಿಪಿ-2 ಕ್ಕೆ ಚಾಸಾ-2 ಮತ್ತು 3 ರವರು ಸಹಿಯನ್ನು ಮಾಡಿದರು. ಪಂಚನಾಮೆಯನ್ನು ಬೆಳಿಗ್ಗೆ 7.00 ರಿಂದ 8.00 ಗಂಟೆಯವರೆಗೆ ಮಾಡಲಾಗಿದೆ. ಸ್ದಳವನ್ನು ಪರಿಶೀಲನೆ ಮಾಡಿದ ನಂತರ ಪೋಲೀಸರು ಹೊರಟು ಹೋದರು. ನಾನು ಆರೋಪಿಯನ್ನು ನೋಡಿದರೆ ಗುರುತ್ತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ.

ಈಗ ಸಾಕ್ಷಿಗೆ 2 ಪೋಟೋಗಳನ್ನು ತೋರಿಸಿದ್ದು, ಸದರಿ ಪೋಟೋಗಳಲ್ಲಿ ಇರುವ ವಾಹನವು ನನ್ನ ಮಗಳಿಗೆ ಡಿಕ್ಕಿಪಡಿಸಿರುತ್ತದೆ.

ಸದರಿ ಪೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು ದಿಃ 07-06-2023 ರಂದು ನಿಮ್ಮ ಮಗಳಿಗೆ ಆಗಿರುವ ಅಪಘಾತಕ್ಕೆ ವಿಷಯಕ್ಕೆ ಸಂಬಂಧಿಸಿದಂತೆ ನಿಪಿ-1 ರಂತೆ ದೂರನ್ನು ನೀಡಿರುತ್ತೀರಾ ಮತ್ತು ನಿಪಿ-1 ರ ಆದಾರದ ಮೇಲೆ ದಿಃ08-06-2023 ರಂದು ಪೋಲೀಸರು ನಿಪಿ-2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಒಂದು ಪೋಟೋವನ್ನು ತೆಗೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-2 ರಲ್ಲಿ ಕಾಣಿಸುತ್ತಿರುವ ಪೋಟೋದಲ್ಲಿ ನೀವು, ಚಾಸಾ-2 ಮತ್ತು 3 ರವರು ಇದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ. ಆರ್.ಎಸ್, ವಕೀಲರಿಂದಃ-**

ನಿಪಿ-1 ನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ, ಆದರೆ ನಾನು ಹೇಳಿದ ರೀತಿಯಲ್ಲಿ ನಿಪಿ-1 ನ್ನು ಬರೆಯಲಾಗಿದೆ. ನಾನು ಅಪಘಾತ ನಡೆದ 1 ನಿಮಿಷದ ನಂತರದಲ್ಲಿ ಸ್ಥಳಕ್ಕೆ ಬಂದಿರುತ್ತೇನೆ. ಸಾಕ್ಷಿಯು ಮುಂದುವರಿದು ತಾನು ಶಾಲಾ ವಾಹನ ಬಂದಿದ್ದನ್ನು ನೋಡಿದ್ದೇನೆ ಮತ್ತು 1 ನೇ ಅಂತಸ್ತಿನ ಮಹಡಿಯಲ್ಲಿರುವ ಮನೆಯಿಂದ ಇಳಿದುಕೊಂಡು ಬರುವಾಗ ಅಪಘಾತವು ಆಗಿತ್ತು ಎಂದು ನುಡಿದಿರುತ್ತಾರೆ.

ನಾವು 4.00 ಗಂಟೆಯ ಸಮಯದಲ್ಲಿ ಅಮ್ಮಾ ಆಸ್ಪತ್ರೆಗೆ ಹೋಗಿರುತ್ತೇವೆ. ಅಮ್ಮಾ ಅಸ್ಪತ್ರೆ ಮತ್ತು ತಾವರೆಕೆರೆ ಪೋಲೀಸ್ ಠಾಣೆಗೆ ಸುಮಾರು 100 ಅಡಿಗಳ ಅಂತರವಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಅಪಘಾತ ನಡೆದ ತಕ್ಷಣ ದೂರನ್ನು ನೀಡಿರುವುದಿಲ್ಲ.

2. ನಾನು ಅಪಘಾತ ನಡೆದ ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿ ಚಾಸಾ-13 ಮತ್ತು 14 ರವರು ಇದ್ದರು. ನೀವು ಅಪಘಾತ ಆಗಿರುವ ಬಗ್ಗೆ ಚಾಸಾ-13 ಮತ್ತು 14 ರವರಿಂದ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತಾನೇ ಖುದ್ದಾಗಿ ಅಪಘಾತವನ್ನು ನೋಡಿದ್ದೇನೆ ಎನ್ನುತ್ತಾರೆ. ನಿಪಿ-1 ರಲ್ಲಿ ನೀವು ಅಪಘಾತ ನಡೆದ ಸ್ಥಳಕ್ಕೆ ನೀವು ಹೋಗುವಷ್ಟರಲ್ಲಿ ಚಾಸಾ-13 ಮತ್ತು 14 ರವರು ಇದ್ದರು ಎಂದು ಹೇಳಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ವಿಷಯವನ್ನು ನೀವು ನಿಪಿ-1 ರಲ್ಲಿ ಹೇಳದೇ ಇದ್ದರೂ ಸಹ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

3. ಅಪಘಾತ ನಡೆದ ದಿನದಂದು ನಾನು ಅಮ್ಮಾ ಆಸ್ಪತ್ರೆಯಲ್ಲಿ 5 ನಿಮಿಷಗಳ ಕಾಲ ಇದ್ದೇನು. ನಂತರ ಸಂಜೆ 4.20 ರಿಂದ 4.25 ರ ಸಮಯದಲ್ಲಿ ಸುಂಕದಕಟ್ಟೆಯಲ್ಲಿ ಇರುವ ಲಕ್ಷ್ಮಿ ಆಸ್ಪತ್ರೆಗೆ ಹೋದೇವು. ನಾನು ಲಕ್ಷ್ಮಿ ಆಸ್ಪತ್ರೆಯಲ್ಲಿ ಎಷ್ಟು ಹೊತ್ತು ಇದ್ದೇನು ಎಂದು ಹೇಳಲು ಆಗುವುದಿಲ್ಲ. ಲಕ್ಷ್ಮಿ ಆಸ್ಪತ್ರೆಯಿಂದ ನನ್ನ ಮಗಳ ಮೃತ ದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಾನು ರಾಜರಾಜೇಶ್ವರಿ ಆಸ್ಪತ್ರೆಗೆ ಹೋಗಿರುವುದಿಲ್ಲ ಮತ್ತು ಬ್ಯಾಡರಹಳ್ಳಿಯಲ್ಲಿ ಇರುವ ನನ್ನ ನಾದಿನಿ ಮನೆಯಲ್ಲಿ ಆ ದಿನ ರಾತ್ರಿ ಉಳಿದುಕೊಂಡೆನು. ಮಾರನೇ ದಿನ ನನ್ನ ಮಗಳ ಮೃತ ದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಯಾವ ಸಮಯದಲ್ಲಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಯು ಮುಂದುವರಿದು ಬೆಳಿಗ್ಗೆ ಸುಮಾರು 10.30 ರ ಸಮಯದಲ್ಲಿ ಮೃತ ದೇಹವನ್ನು ನೀಡಿದರು ಎಂದು ನುಡಿದಿರು ನುಡಿದಿರುತ್ತಾರೆ. ನಾನು ತಾವರೆಕೆರೆಯಲ್ಲಿ ಇರುವ ನನ್ನ ಮನೆಗೆ ಅಪಘಾತ ನಡೆದ 10 ರಿಂದ 15 ದಿನಗಳ ನಂತರ ಬಂದಿರುತ್ತೇನೆ. ಅಲ್ಲಿಯವರೆಗೆ ನಾನು ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನಲ್ಲಿ ಇರುವ ಹೆಗ್ಗಡೆ ಹಳ್ಳಿಯಲ್ಲಿ ಇರುವ ನನ್ನ ಗಂಡನ ಮನೆಯಲ್ಲಿ ಇದ್ದೇನು. ಅಪಘಾತ ನಡೆದ ಮಾರನೇ ದಿನ ಬೆಳಿಗ್ಗೆ 8.00 ಸಮಯದಲ್ಲಿ ನಾನು ಹೆಗ್ಗಡೆಹಳ್ಳಿಗೆ ಹೋಗಿರುತ್ತೇನೆ. ಸಾಕ್ಷಿಯು ಮುಂದುವರಿದು ತಾನು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹೋದೇನು ಎಂದು ನುಡಿದಿರುತ್ತಾರೆ. ಮಾರನೇ ದಿನ ಬೆಳಿಗ್ಗೆ 10.30 ರಿಂದ 11.00 ಗಂಟೆ ಸಮಯದಲ್ಲಿ ನನ್ನ ಮಗಳ ಮೃತ ದೇಹವನ್ನು ತಾವರೆಕೆರೆಯಲ್ಲಿ ಇರುವ ನಮ್ಮ ಮನೆಗೆ ಕರೆದುಕೊಂಡು ಬಂದು ನಂತರ ಹೆಗ್ಗಡೆಹಳ್ಳಿಗೆ ತೆಗೆದುಕೊಂಡು ಹೋಗಿರುತ್ತೇವೆ.

4. ಶವಸಂಸ್ಕಾರವನ್ನು ಮುಗಿಸಿ 13 ದಿನಗಳ ನಂತರ ನಾನು ತಾವರೆಕೆರೆ ಬಂದಿರುತ್ತೇನೆ. ನಿಪಿ-2 ನ್ನು ಮನೆಯ ಹತ್ತಿರ ಪೋಲೀಸರು ಲ್ಯಾಪ್ ಟಾಪ್ ನಲ್ಲಿ ಬರೆಳಚ್ಚುನ್ನು ಮಾಡಿರುತ್ತಾರೆ. ಪೋಲೀಸರು ನಾನು ಹೆಗ್ಗಡೆಹಳ್ಳಿಯಲ್ಲಿ ಇರುವಾಗ ನನಗೆ ಕರೆ ಮಾಡಿ ತಾವರೆಕೆರೆಗೆ ಯಾವಾಗ ಬರುತ್ತೀರಾ ಎಂದು ಕೇಳಿದರು. ಆಗ ನಾನು ಅವರಿಗೆ ಏನನ್ನೂ ಸಹ ಹೇಳಿರುವುದಿಲ್ಲ. ಪೋಲೀಸರು ಮೊದಲೇ ಬಂದು ನಮ್ಮ ಮನೆಯ ಹತ್ತಿರ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ, ಆ ಸಮಯದಲ್ಲಿ ನಾನು ಇಲ್ಲದೇ ಇರುವ ಕಾರಣ ಅವರು ನಂತರದ ದಿನಗಳಲ್ಲಿ ನನ್ನಿಂದ ನಿಪಿ-2 ಕ್ಕೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸ್ಥಳ ಪಂಚನಾಮೆಯನ್ನು ಮಾಡಿದ 10 ರಿಂದ 12 ದಿನಗಳ ನಂತರ ನಾನು ನಿಪಿ-2 ಕ್ಕೆ ನನ್ನ ಮನೆಯ ಹತ್ತಿರ ಸಹಿಯನ್ನು ಮಾಡಿರುತ್ತೇನೆ. ನಾನು ನಿಪಿ-2 ಕ್ಕೆ ಸಹಿಯನ್ನು ಮಾಡುವ ಮೊದಲೇ ಪೋಲೀಸರು ನಿಪಿ-2 ನ್ನು ಬೆರಳಚ್ಚು ಮಾಡಿ ತಂದಿರುತ್ತಾರೆ.

5. ಅಪಘಾತ ನಡೆದ ಸಮಯದಲ್ಲಿ ಶಾಲಾ ವಾಹನವು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಉತ್ತರದಿಂದ ದಕ್ಷಿಣ ದಿಕ್ಕಿಗೆ ಶಾಲಾ ವಾಹನವು ಹೋಗಿತ್ತು ಎಂದು ನುಡಿದಿರುತ್ತಾರೆ. ಅಪಘಾತ ನಡೆದ ದಿನದಂದು ನಾನೇ ಖುದ್ದಾಗಿ ಪೋಲೀಸ್ ಠಾಣೆಗೆ ಹೋಗಿ ನಿಪಿ-1 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ಪೋಲೀಸ್ ಠಾಣೆಗೆ ನನ್ನ ಯಜಮಾನರಾದ ಚಾಸಾ-10 ರವರು ಬಂದಿದ್ದರು. ಸಂಜೆ 7.00 ಗಂಟೆಯ ಸಮಯದಲ್ಲಿ ನಾನು ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಲಕ್ಷ್ಮಿ ಆಸ್ಪತ್ರೆಯಿಂದ ರಾಜರಾಜೇಶ್ವರಿ ಆಸ್ಪತ್ರೆಗೆ ನನ್ನ ಮಗಳನ್ನು ಯಾರು ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಶಾಲಾ ವಾಹನವು ಅಪಘಾತ ಮಾಡಿದ ಸಮಯದಲ್ಲಿ ಪಶ್ಚಿಮ ದಿಕ್ಕಿನಿಂದ ಪೂರ್ವ ದಿಕ್ಕಿಗೆ ಹೋಗುತ್ತಿತ್ತು. ಅಪಘಾತ ನಡೆದ ಸ್ಥಳದಲ್ಲಿ ನೀವು ಇರಲಿಲ್ಲ, ಆಗಾಗಿ ವಾಹನವು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತಿತ್ತು ಎಂಬ ಮಾಹಿತಿಯು ನಿಮಗೆ ಇಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ನೀವು ಅಪಘಾತವನ್ನು ಕಣ್ಣಾರೆ ನೋಡಿದ್ದೇನೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

6. ಅಪಘಾತವು ಅತಿವೇಗದಿಂದ ವಾಹನವನ್ನು ಚಾಲನೆ ಮಾಡಿ ಸಂಭವಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಶಾಲಾ ವಾಹನವು ನಿಲ್ಲಿಸಿ ಮಕ್ಕಳು ಇಳಿದ ನಂತರ ಅಪಘಾತವು ಸಂಭವಿಸಿರುತ್ತದೆ. ಶಾಲಾ ವಾಹನ ನಿಲ್ಲಿಸಿದ ಸ್ಥಳಕ್ಕೂ ಮತ್ತು ಅಪಘಾತ ನಡೆದ ಸ್ಥಳಕ್ಕೂ ಎಷ್ಟು ಅಂತರ ಇದೆ ಎಂದರೆ ಸಾಕ್ಷಿಯು ನಿಂತ ಸ್ಥಳದಲ್ಲಿಯೇ ಅಪಘಾತವು ಸಂಭವಿಸಿತ್ತು ಎನ್ನುತ್ತಾರೆ. ಶಾಲಾ ವಾಹನವು ಪಶ್ಚಿಮ ದಕ್ಕಿನಿಂದ ಪೂರ್ವದ ಕಡೆಗೆ ಪ್ರಯಾಣಿಸುತ್ತಿರುವುದಿಲ್ಲ ಬದಲಾಗಿ ಉತ್ತರದ ಕಡೆಯಿಂದ ದಕ್ಷಿಣ ಕಡೆಗೆ ವಾಹನವು ಪ್ರಯಾಣಿಸುತ್ತಿತ್ತು ಮತ್ತು ಅಲ್ಲಿ ಬಂದು ವಾಹನವನ್ನು ನಿಲ್ಲಿಸಿದರು

ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವಾಹನವನ್ನು ದಕ್ಕಿಣ ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವಾಹನವನ್ನು ನಿಲ್ಲಿಸಿದ ಸ್ಥಳದ ಪಶ್ಚಿಮ ದಿಕ್ಕಿನ ಕಡೆಗೆ 100 ಅಡಿ ಅಂತರದಲ್ಲಿ ನಿಮ್ಮ ಮನೆ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

7. ವಾಹನದಿಂದ ಮಕ್ಕಳು ಇಳಿದ ನಂತರ ಮಕ್ಕಳೇ ವಾಹನದ ಬಾಗಿಲನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರಿದು ವಾಹನದ ಬಾಗಿಲು ತೆಗೆದಿತ್ತು ಎಂದು ನುಡಿದಿರುತ್ತಾರೆ. ಶಾಲಾ ವಾಹನದಿಂದ 3 ಮಕ್ಕಳು ಇಳಿದಿರುತ್ತಾರೆ, ಅವುಗಳ ಪೈಕಿ ಇಬ್ಬರೂ ಮಕ್ಕಳು ಪೂರ್ವ ದಿಕ್ಕಿನ ಕಡೆಗೆ ನಿಂತುಕೊಳ್ಳುತ್ತಾರೆ ಮತ್ತು ನಿಮ್ಮ ಮಗಳಿಗೆ ತಿಳುವಳಿಕೆ ಇಲ್ಲದ ಕಾರಣ ಪೂರ್ವದ ಕಡೆಯಿಂದ ಪಶ್ಚಿಮದ ಕಡೆಗೆ ಬಸ್ಸಿನ ಮುಂದೆ ಹೋಗಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಬಸ್ಸಿನ ಮುಂದೆ ನಿಮ್ಮ ಮಗಳು ಹೋಗಿರುವ ಬಗ್ಗೆ ಆರೋಪಿಗೆ ತನ್ನ ಚಾಲಕನ ಸ್ಥಳದಿಂದ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸಾಕ್ಷಿಯು ಮಂದುವರಿದು ಆರೋಪಿಯು ದೊಡ್ಡ ಮಕ್ಕಳ ಜೊತೆ ಕೂಗಾಡಿಕೊಂಡು ಮಾತನಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಸದರಿ ವಿಷಯವನ್ನು ನಾನು ನಿಪಿ-1 ರಲ್ಲಿ ಹೇಳಿರುತ್ತೇನೆ. ನೀವು ಸ್ಥಳದಲ್ಲಿ ಇದ್ದೇದ್ದೇ ಆದ ಪಕ್ಷದಲ್ಲಿ ಅಪಘಾತವು ಸಂಭವಿಸುತ್ತಿರಲಿಲ್ಲ ಮತ್ತು ನಿಮ್ಮ ಬೇಜಾಬ್ದಾರಿಯಿಂದ ಅಪಘಾತವು ಸಂಬಂವಿಸಿತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರಿದು ಪ್ರತಿದಿನ 4.00 ಗಂಟೆಗೆ ಬರುವ ಶಾಲಾ ವಾಹನ ಆ ದಿನದಂದು 3.45 ರ ಸಮಯಕ್ಕೆ ಬಂದಿರುತ್ತದೆ ಮತ್ತು ಸದರಿ ವಾಹನಕ್ಕೆ ಆಯಾ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಶಾಲೆಯ ಆಡಳಿತ ವರ್ಗದವರು ಆಯಾವನ್ನು ನೇಮಕ ಮಾಡಿಲ್ಲ ಎಂದು ಹೇಳಿ ಪೋಲೀಸರು ಅವರ ವಿರುದ್ದ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

8. ಅಪಘಾತ ನಡೆದ ತಕ್ಷಣ ಸ್ಥಳಕ್ಕೆ ಒಂದು ದ್ವಿ ಚಕ್ರವಾಹನ ಬರುತ್ತದೆ ಸದರಿ ವಾಹನದಲ್ಲಿ ನಿಮ್ಮನ್ನು ಕೂರಿಸಿ ಆರೋಪಿಯೇ ನಿಮ್ಮ ಮಗುವನ್ನು ನಿಮ್ಮ ಮೇಲೆ ಕೂರಿಸಿ ಸದರಿ ದ್ವಿ ಚಕ್ರವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ದ್ವಿಚಕ್ರವಾಹನದಲ್ಲಿ ಆಸ್ಪತ್ರೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತ ನಡೆದ ಸಮಯದಲ್ಲಿ ಶಾಲಾ ವಾಹನದಲ್ಲಿ ಇನ್ನೂ ಹಲವಾರು ಶಾಲಾ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಮಕ್ಕಳನ್ನು ಆಗೆ ಬಿಟ್ಟು ಹೋಗಲು ಆಗದೇ ಇರುವ ಕಾರಣ ಆರೋಪಿಯು ಮಕ್ಕಳನ್ನು ಮನೆಗೆ ಬಿಟ್ಟ ನಂತರ ನಿಮ್ಮ ನೋಡಲು ಅಮ್ಮಾ ಆಸ್ಪತ್ರೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಹಂತರದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯುನ್ನು ನಿಮ್ಮ ಕೈಯ ಮೇಲೆ ಬರೆದುಕೊಂಡಿರುವ ಸಂಖ್ಯೆಯು ಯಾವುದು ಎಂದು ಕೇಳಿದಾಗ ಸಾಕ್ಷಿಯು ಶಾಲಾ ವಾಹನದ ಸಂಖ್ಯೆಯಾಗಿದೆ ಎನ್ನುತ್ತಾರೆ. ಶಾಲಾ ಆಡಳಿತ ವರ್ಗದವರು ಸದರಿ ಶಾಲಾ ವಾಹನಕ್ಕೆ ಮಕ್ಕಳ ಉಸ್ತುವಾರಿಗಾಗಿ ಆಯಾವನ್ನು ನೇಮಕ ಮಾಡಿದ್ದರೆ ಸದರಿ ಅಪಘಾತವು ಸಂಭಸಿರುವುದಿಲ್ಲ ಮತ್ತು ಈ ಅಪಘಾತಕ್ಕೆ ಶಾಲಾ ಆಡಳಿತ ವರ್ಗದವರು ನೇರವಾಗಿ ಹೊಣೆಯಾಗಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

9. ಸದರಿ ಅಪಘಾತದಿಂದ ನಾನು 2 ರಿಂದ 3 ದಿನಗಳ ಕಾಲ ಆಘಾತಕ್ಕೆ ಒಳಗಾಗಿರುತ್ತೇನೆ, ಆದರೆ ಆಸಮಯದಲ್ಲಿ ನನಗೆ ಪ್ರಜ್ಞೆ ಇತ್ತು. ಪೋಲೀಸರು ನೀವು ಬ್ಯಾಡರಹಳ್ಳಿಯಲ್ಲಿ ಇದ್ದಾಗ ಅಲ್ಲಿಗೆ ಬಂದು ನಿಪಿ-1ನ್ನು ಅವರೇ ಮೊದಲೇ ತಯಾರು ಮಾಡಿಕೊಂಡು ಬಂದು ನಿಮ್ಮಿಂದ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮಗೆ ಶಾಲಾ ಆಡಳಿತ ವರ್ಗದವರು ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ಹಣವನ್ನು ನೀಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ನನ್ನ ತಂದೆ ಅಥವಾ ನನ್ನ ಕುಟುಂಬದವರು ಯಾರು ಸಹ ಶಾಲಾ ಆಡಳಿತ ವರ್ಗದಿಂದ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ. ಶಾಲಾ ಆಡಳಿತ ವರ್ಗದವರ ತಪ್ಪಿನಿಂದಲೇ ಅಪಘಾತವು ಸಂಬಂವಿಸಿರುತ್ತದೆ ಮತ್ತು ಅದನ್ನು ಮುಚ್ಚು ಹಾಕುವ ಸಲುವಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಇಬ್ಬರ ತಪ್ಪು ಸಹ ಇದೆ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವಾಗ ಮಾಡಿರುವ ನಕ್ಷೆಯನ್ನು ಯಾವಾಗ,ಯಾರು ಮತ್ತು ಎಲ್ಲಿ ಮಾಡಿದರು ಎಂದು ನನಗೆ ಗೊತ್ತಿಲ್ಲ.

10. ನಿಪಿ-2 ರಲ್ಲಿ ಇರುವ ಪೋಟೋವನ್ನು ಅಪಘಾತ ನಡೆದ 10-12 ದಿನಗಳ ನಂತರ ತೆಗೆಯಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಸದರಿ ಅಪಘಾತವು ನಿಮ್ಮ ಮತ್ತು ಶಾಲಾ ಆಡಳಿತ ವರ್ಗದ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ಸದರಿ ಅಪಘಾತಕ್ಕೆ ಸಂಬಂದಿಸಿದಂತೆ ಪರಿಹಾರವನ್ನು ಕೋರಿ ಪ್ರತ್ಯೇಕ ಪ್ರಕರಣವನ್ನು ಸಲ್ಲಿಸಿರುತ್ತೇನೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**

**ಮಾಗಡಿ**